ಹಾಡಿದ ಯಾವುದೇ ಹಾಡಿಗೆ ನಾನು ಬಾನ್ಸುರಿ ನುಡಿಸಿದರೂ ಅದು ಸೂಪರ್ ಹಿಟ್ ಆಗುತ್ತಿತ್ತು. ಅದು 1984ನೇ ಇಸವಿ. ಸಂಗೀತ ನಿರ್ದೇಶಕ ಆರ್.ಡಿ. ಬರ್ಮನ್ ಸಂಯೋಜಿಸಿದ 'ಜಮೀನ್ ಆಸ್‌ಮಾನ್' ಸಿನಿಮಾದ 'ಐಸಾ ಸಮ ನ ಹೋತಾ, ಕುಚ್ ಬಿ ಯಹಾನ್ ನಹಿ ಹೋತಾ...' ಲತಾಜಿ ಮನದುಂಬಿ ಹಾಡಿದ ಹಾಡಿಗೆ ನಾನು ಬಾನ್ಸುರಿ ನುಡಿಸಿದ್ದೆ. ಅದು ಬಹಳ ಜನಪ್ರಿಯವಾಯಿತು. ನಮ್ಮಿಬ್ಬರ ಬಾಂಧವ್ಯ ಮತ್ತಷ್ಟು ಗಟ್ಟಿಯಾಯಿತು. ಹಾಗೇ ಮತ್ತೊಂದು ಸಿನಿಮಾ '1942 ಲವ್ ಸ್ಟೋರಿ'ಯಲ್ಲಿನ 'ಕುಚ್ ನ ಕಹೊ' ಹಾಡಿಗೂ ನಾನೇ ಬಾನ್ಸುರಿ ನುಡಿಸಿದ್ದು. ಅದೂ ಸೂಪರ್ ಹಿಟ್ ಆಯ್ತು.

ಇನ್ನೊಂದು ಭಜನ್ – 'ಸಪ್ನೆ ಕಿ ಮೆ ಆಯಾ ಬೋಲ ಮೇ ಹೋಗಿ ರೇ ಮುಲಾಕಾತ್ ಸುನೊ'. ಇದಕ್ಕೆ ನಾನು ಬಾನ್ಸುರಿ ನುಡಿಸಿದೆ. ಇದನ್ನು ಆಲಿಸಿದ ಲತಾಜಿ, ಬಹಳ ಖುಷಿಪಟ್ಟು ಮತ್ತೊಮ್ಮೆ ಇಡೀ ಹಾಡು ನುಡಿಸುವಂತೆ ನನ್ನಲ್ಲಿ ವಿನಂತಿಸಿದರು. ಅವರ ಕೋರಿಕೆಯಂತೆ ತಕ್ಷಣ ಮತ್ತೊಮ್ಮೆ ನುಡಿಸಿದೆ. ಬಹಳ ಖುಷಿಪಟ್ಟರು. 'ನೀವೇ ನಿಜವಾದ ಸಾಧಕ' ಎಂದು ಬೆನ್ನುತಟ್ಟಿದರು. ಅದು ನನಗೆ ರೋಮಾಂಚಕ ಕ್ಷಣ.

ಸಿನಿಮಾ ಹಾಡಿನ ರೆಕಾರ್ಡಿಂಗ್ ಸ್ಟುಡಿಯೊಗೆ ನಾನು ಬಾನ್ಸುರಿ ನುಡಿಸಲು ಹೋಗುವ ಮುನ್ನವೇ 'ಯಾರು ಹಾಡುವುದು?' ಎಂದು ಕೇಳಿಯೇ ಹೋಗುತ್ತಿದ್ದೆ. ಲತಾಜಿ ಎಂದಾದರೆ ಮತ್ತೊಮ್ಮೆ ಇಡೀ ಹಾಡನ್ನು ಪ್ರಾಕ್ಟೀಸ್ ಮಾಡಿಯೇ ಹೋಗುತ್ತಿದ್ದೆ; ಲತಾಜಿ ಅವರಿಗೆ 'ಡಿಸ್ಟರ್ಬ್' ಆಗಬಾರದೆನ್ನುವ ಉದ್ದೇಶದಿಂದ.

1940ರಿಂದ ಈಚೆಗೆ ಸುಮಾರು 75 ವರ್ಷ ಕಾಲ ಸಿನಿಮಾ ಇಂಡಸ್ಟ್ರಿಯಲ್ಲಿ ಸಂಗೀತ ಸಾಮ್ರಾಜ್ಞಿಯಾಗಿ ಮೆರೆದದ್ದು ಲತಾಜಿ ಅಗ್ಗಳಿಕೆ.



ಮುಂಬಯಿಯಲ್ಲಿ ಲತಾ ಮಂಗೇಶ್ಕರ್ ಅವರ ಮನೆಯಲ್ಲಿ ರೋಣು ಮಜುಂದಾರ್

## ಪಾನಿ ಪಾನಿ ರೆ...

ಲತಾಜಿ ಅವರ ಕೊನೆಯ ಹಾಡು 1996ರಲ್ಲಿ ಬಿಡುಗಡೆಯಾದ 'ಮಾಚೀಸ್' ಸಿನಿಮಾದ, ಗುಲ್ಜಾರ್ ಸಂಗೀತ ನಿರ್ದೇಶನದ 'ಪಾನಿ ಪಾನಿ ರೆ; ಕಾರಜ್ ಪಾನಿ ರೆ...' ಅದು ನೋವಿನ, ಬೇಸರದ ಸನ್ನಿವೇಶ ಇರುವ ಹಾಡು. ಆ ಹಾಡಿಗೆ ನಾನು ಮಾರ್ಮಿಕವಾಗಿ ಬಾನ್ಸುರಿ ನುಡಿಸಿದಾಗ ಲತಾಜಿ ಕಣ್ಣಲ್ಲಿ ಧಾರಾಕಾರ ನೀರು! ಅದನ್ನು ಕಂಡ ನಾನೂ ಅತ್ತುಬಿಟ್ಟೆ. ಬಹಳ ಭಾವುಕ ಕ್ಷಣವದು.

'ಸಾಧ್ನ' (1983) ಸಿನಿಮಾದ 'ಸುರ್‌ಮೆ ಅಕಿಯೋಮೆ' ಹಾಡು ಗಾಯಕ ಕೆ.ಜೆ. ಯೇಸುದಾಸ್ ಹಾಡಿದ್ದು, ನಾನು ಬಾನ್ಸುರಿ ನುಡಿಸಿದ್ದನ್ನು ತುಂಬ ಇಷ್ಟಪಟ್ಟರು ಲತಾಜಿ. ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ಸಂಗೀತ ಸಂಯೋಜಿಸಿದ 'ಜಿಯಾ ಚಲೆ' ಹಾಡನ್ನು ಮಗು ಹಾಡಿದಂತೆ ಹಾಡಿದ್ದನ್ನು ಕೇಳುಗರು ಎಂದೂ ಮರೆಯುವಂತಿಲ್ಲ.

ಮತ್ತೊಮ್ಮೆ ನನ್ನ ಬಾನ್ಸುರಿ ಆಲ್ಬಂ 'ಹಾರ್ಟ್ ಟು ಹಾರ್ಟ್'ಗಾಗಿ ತಬಲಾ ಮಾಂತ್ರಿಕ ಜಾಕೀರ್ ಹುಸೇನ್ ಅವರು ನನಗೆ ಸಾಥಿ ನೀಡಲು ಬಂದಿದ್ದರು. ಅದು ರೆಕಾರ್ಡಿಂಗ್ ಆಗುವಾಗ ಲತಾಜಿ ಅವರೂ ಇದ್ದರು. ಟಿ ಸಿರೀಸ್‌ಗಾಗಿ ನುಡಿಸಿದ ಆ ಆಲ್ಬಂಗಾಗಿ ರಾಗ ಗೋರಕ್ ಕಲ್ಯಾಣ್ ಹಾಗೂ ಜೈಜವಂತಿ ನುಡಿಸಿದ್ದೆ. ಸ್ಟುಡಿಯೊದಲ್ಲಿ ಇಡೀ ಎರಡೂ ರಾಗಗಳನ್ನು ಆಲಿಸಿದ ಲತಾಜಿ ನನಗೆ ಆಶೀರ್ವದಿಸಿದರು. ಮುಂದೆ ಲೈವ್ ಕಛೇರಿಗಳಿಗೆ ಬರುವುದಾಗಿ ಹೇಳಿದ್ದರು.

ನಾವಿಬ್ಬರೂ ಅಮೆರಿಕ ಸೇರಿದಂತೆ ಹಲವು ದೇಶಗಳಿಗೆ ಹೋಗಿದ್ದೆವು. ನನ್ನ ಬಾನ್ಸುರಿ ಕಛೇರಿ ಕೇಳಲೆಂದೇ ಅಮೆರಿಕಕ್ಕೆ ನನ್ನೊಂದಿಗೆ ಬರುವುದಾಗಿ ಹೇಳಿದ್ದರು. ಅದು ಕೈಗೂಡಲೇ ಇಲ್ಲ.

ಸಂಗೀತ ಕ್ಷೇತ್ರದಲ್ಲಿ ಲತಾಜಿ, ಪಂ. ರವಿಶಂಕರ್ ಅವರೆಲ್ಲ 'ದೇವತಾ ಸ್ವರೂಪಿ'ಗಳು. 'ಭಾರತ ರತ್ನ' ಎನಿಸಿಕೊಂಡರು. ಲತಾಜಿ ತಮ್ಮ ಹಾಡಿನಿಂದ ಪಂ. ನೆಹರೂ ಅವರ ಕಣ್ಣಲ್ಲಿ ಖುಷಿಯ ನೀರು ಬರುವಂತೆ ಮಾಡಿದರು. ಲತಾಜಿ, ರವಿಶಂಕರ್ ಇಬ್ಬರೂ ಇಂದು ನಮ್ಮೊಂದಿಗಿಲ್ಲ. **Everybody will go, we can not go against the system'.**

ಮೇರಾ ಮಾ, ಮೇರಾ ದೀದಿ, ಮೇರಾ ಲತಾಜಿ..! ಸಂಗೀತ ತಾಯಿಗೆ ನನ್ನ ಮನದಾಳದ ನುಡಿನಮನ.

**ಪ್ರತಿಕ್ರಿಯಿಸಿ: feedback@sudha.co.in**



ಮಾಜಿ ರಾಷ್ಟ್ರಪತಿ ಕೆ. ಆರ್. ನಾರಾಯಣನ್ ಅವರಿಂದ ಭಾರತರತ್ನ ಪುರಸ್ಕಾರ ಸ್ವೀಕರಿಸಿದ್ದ ಕ್ಷಣ